ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಗುರುವಾರ, ದಿನಾಂಕ: 18ನೇ ಜುಲೈ, 2019

ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮದ ಷರತ್ತು ಸಡಿಲಿಕೆ ಬಗ್ಗೆ

ಶ್ರೀ ಪಿ. ಆರ್. ರಮೇಶ್ (ನಾಮ ನಿರ್ದೇಶನ ಹೊಂದಿದವರು) :-

334 (535) ಮಾನ್ಯ ಸಣ್ಣ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ (ಕೆ.ಎಸ್.ಎಸ್.ಐ.ಡಿ.ಸಿ) ದ ಸ್ಪೆಷಲ್ ಇನ್ಸೆಂಟೀವ್ ಸ್ಕೀಮ್ ಅಡಿಯಲ್ಲಿ ಷರತ್ತು ಸಡಿಲಿಸಿ ಖಾಲಿ ನಿವೇಶನಗಳಿಗೆ ಕ್ರಯ ಪತ್ರ ನೀಡಲು ಸರ್ಕಾರ ನಿರ್ದೇಶಿಸಿರುವ 2010 ರ ಬಗ್ಗೆ ಮಾಹಿತಿ ನೀಡುವುದು; ಈ ಬಗ್ಗೆ ಕೆ.ಎಸ್.ಎಸ್.ಐ.ಡಿ.ಸಿ. ಸಭೆಯ 315, 316 ಮತ್ತು 318 ರ ನಡವಳಿಕೆ ಜೊತೆಗೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ದಿನಾಂಕ: 21.11.2014 ರಂದು ನಡೆಸಿದ ಸಭೆಯ ನಡವಳಿಕೆಗಳ ಮಾಹಿತಿ ಹಾಗೂ ಇದಕ್ಕೆ ಸಂಬಂಧಿಸಿದ ಎ.ಜಿ. ಆಡಿಟ್ ಹಾಗೂ ಕಾನೂನು ಅಭಿಪ್ರಾಯ ಇದ್ದಲ್ಲಿ, ಅವುಗಳ ಮಾಹಿತಿ ಮತ್ತು ದಾಖಲೆಗಳನ್ನು ಒದಗಿಸುವುದು ;

(ಆ) ಅರ್ಜಿದಾರರು Iಟಿ ಠಿಡಿiಟಿಛಿiಠಿಟe ಐಂಚಿಟ Sಚಿಟಿಛಿಣioಟಿ ಟeಣಣeಡಿ ಸಮೇತ ದಿನಾಂಕ: 31.12.2010 ರವರೆಗೆ ಸಲ್ಲಿಸಿರುವ 593 ಪ್ರಕರಣಗಳ ಪೈಕಿ 283 ಪ್ರಕರಣಗಳ ಕ್ರಯ ಪತ್ರಗಳನ್ನು ನಿರ್ವಹಿಸಿಕೊಡಲಾಗಿದ್ದು, ನಿಗಧಿತ ದಿನಾಂಕದೊಳಗೆ ಅರ್ಜಿಯನ್ನು ಸಲ್ಲಿಸಿದ್ದಾಗ್ಯೂ, ಸದರಿ ಅವಧಿಯಲ್ಲಿ ಕ್ರಯಪತ್ರ ನಿರ್ವಹಿಸದಿರುವ 310 ಪ್ರಕರಣಗಳು ಬಾಕಿ ಇರುವುದು ನಿಜವೇ;

(ಇ) ಅವುಗಳಲ್ಲಿ 91 ಪ್ರಕರಣಗಳಲ್ಲಿ ನಿಗಮದ ನಿಯಮಗಳ ಅನ್ವಯ ಕ್ರಯ ಪತ್ರಗಳನ್ನು ಈಗಾಗಲೇ ನೀಡಲಾಗಿದ್ದು, ಈ ಎಲ್ಲಾ ಪ್ರಕರಣಗಳಿಗೆ ಸಂಬಂಧಿಸಿದಂತೆ ಹಂಚಿಕೆದಾರರ ಹೆಸರು, ವಿಳಾಸ ಹಾಗೂ ಹಂಚಿಕೆಯಾದ ನಿವೇಶನದ ಸಂಖ್ಯೆ ಹಾಗೂ ಅದರ ವಿಳಾಸದೊಂದಿಗೆ ಮಾಹಿತಿ ನೀಡುವುದು ;

(ಈ) ಉಳಿದ 219 ಪ್ರಕರಣಗಳಿಗೆ ಸಂಬಂಧಿಸಿದಂತೆ ಹಂಚಿಕೆದಾರರ ಹೆಸರು, ವಿಳಾಸ, ಹಂಚಿಕೆಯಾದ ನಿವೇಶನದ ಸಂಖ್ಯೆ ಹಾಗೂ ಅದರ ವಿಳಾಸದೊಂದಿಗೆ ಮಾಹಿತಿ ನೀಡುವುದು ;

(ಉ) ಸರ್ಕಾರವು ನಿರ್ದೇಶಿಸಿರುವಂತೆ ಸ್ಪೆಷಲ್ ಇನ್ಸೆಂಟೀವ್ ಸ್ಕೀಮ್ ಅಡಿಯಲ್ಲಿ ಎಷ್ಟು ಪ್ರಕರಣಗಳನ್ನು ಆಡಳಿತ ಮಂಡಳಿಯ ಸಭೆಯಲ್ಲಿ ಮಂಡಿಸಲಾಗಿದೆ ಹಾಗೂ ಇದುವರೆವಿಗೂ ಎಷ್ಟು ಪ್ರಕರಣಗಳ ಬಗ್ಗೆ ಆಡಳಿತ ಮಂಡಳಿಯು ನಿರ್ಣಯಗಳನ್ನು ಕೈಗೊಂಡಿದೆ ;ಉಳಿಕೆ ಪ್ರಕರಣಗಳ ಸಂಖ್ಯೆ ಎಷ್ಟು ; ಈ ಬಗ್ಗೆ ಯಾವ ಕ್ರಮಗಳನ್ನು ಇಲ್ಲಿಯವರೆವಿಗೂ ಕೈಗೊಳ್ಳಲಾಗಿದೆ ? (ಕಳೆದ 5 ವರ್ಷಗಳ ಮಾಹಿತಿ ನೀಡುವುದು)